ಓ. ಎಸ್. ನಂಃ 187/2019

ಪಿ. ಡಬ್ಲ್ಯೂಃ 1

ದಿಃ04-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ ಎಸ್ ಪಿ ವಾದಿ ಪರ ವಕೀಲರಿಂದ.

ಈ ದಾವೆಯಲ್ಲಿ ನಾನು ವಾದಿಯಾಗಿದ್ದು, ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಿಪಿ- 6 ಅಟ್ಲಾಸ್ ಎಂದು ಗುರುತಿಸಲಾಯಿತು .

ಪಾಟೀ ಸವಾಲುಃ ಶ್ರಿ ಜಿ ಕೆ ಜಿ ಪ್ರತಿವಾದಿ ಪರ ವಕೀಲರಿಂದ

ಆಸ್ತಿ ನಂಬರ 27/ಎ ಕರಿ ಹಂಚಿನ ಮನೆ ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಮಲ್ಲಪ್ಪ , ನಾಗರಾಜ ಬಡ್ಡಿ ಅವರ ಹೆಸರಿನಲ್ಲಿ ಇದೆ . ನಿಪಿ1 ರಂತೆ ನಮ್ಮ ಹೆಸರಿನಲ್ಲಿ ಇದೆ ಎಂದರೆ ಸರಿ . ಆಸ್ತಿ ನಂಬರ 27/1 ಬಿ ಕರಿ ಹಂಚಿನ ಮನೆ ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಬಸವರಾಜ ಮಲ್ಲಪ್ಪ ಬಡ್ಡಿ ಅವರ ಹೆಸರಿನಲ್ಲಿ ಇದೆ. ಸದರಿ ಆಸ್ತಿ ಇಸ್ವತ್ತು ಮಾಡಿಸಿದ್ದಾರೆ ಎಂದರೆ ಸರಿ. ಪೂರ್ವ ಪಶ್ಚಿಮ 28 ಪೂಟ ಉತ್ತರ ದಕ್ಷಿಣ 5 ಪೂಟ ಪ್ರತಿವಾದಿ ಅತೀಕ್ರಮಣ ಮಾಡಿದ್ದಾರೆ ಎಂದು ನಾನೇ ಹೇಳಿ ಬರೆಸಿದ್ದೇನೆ ಎಂದರೆ ಸಾಕ್ಷಿಯು ಮುಂದುವರೆದು 5 ಪೂಟ ಮಾತ್ರ ಅತೀಕ್ರಮಣ ಆಗಿದೆ ಎಂದರು. ಅತೀಕ್ರಮಣ ಆದ ಬಗ್ಗೆ ಪಿ ಟಿ ಶೀಟನ್ನು ಹಾಜರುಪಡಿಸಿಲ್ಲ ಎಂದರೆ ಸರಿ . ಸಾಕ್ಷಿಗೆ ವಕಾಲತನ್ನು ತೋರಿಸಿ ಸದರಿ ವಕಾಲತನಲ್ಲಿರುವ 1 ನೇ ಸಹಿ ತೋರಿಸಿದ್ದು ಅದು ನನ್ನದೇ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ2 ತೋರಿಸಿದ್ದು ಸದರಿ ನೋಟಿಸನಲ್ಲಿ ನನ್ನ ಸಹಿ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ3 ತೋರಿಸಿದ್ದು ಅದರಲ್ಲಿರುವ ಸಹಿ ನನ್ನದು ಎನ್ನುವ ಬಗ್ಗೆ ಅನುಮಾನ ಇದೆ ಎಂದು ನುಡಿಯುತ್ತಾರೆ. ಅತೀಕ್ರಮಣ ಆದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸದೇ ಪ್ರತಿವಾದಿಯವರ ಆಸ್ತಿ ಎತ್ತಿ ಹಾಕಲು ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.

Plaintiff/Defendant present and filed affidavit in lieu of his chief examination, examined as PW1/DW1. Got marked EXP1 to 14 .For cross of PW1/DW1 by 03-01-2025

CJ and JMFC Shiggaon